ಇಬ್ಬರೂ ಹಗಲು ರಾತ್ರಿ ಕುಳಿತು ಮತ್ತೆ ಬರೆದಿದ್ದರು. ಕೊನೆಗೂ ಶೂಟಿಂಗ್ ಸುರುವಾಗುವ ಹೊತ್ತಿಗೆ ಒಂದು ಮಟ್ಟಿಗೆ ಹೊಸ ರೂಪ ಕೊಟ್ಟಿದ್ದರು. ಆದರೆ, ಶೂಟಿಂಗ್ ನಡೆಯುತ್ತಿದ್ದರೂ ಗುರುಮೂರ್ತಿಗೆ ಇನ್ನೇನೋ ಆಗಬೇಕಿದೆ. ಇದು ಹೀಗಲ್ಲ ಎಂಬ ಕರಕರೆ ದಿನದಿಂದ ದಿನಕ್ಕೆ ಜಾಸ್ತಿಯಾಗುತ್ತಿತ್ತು. ಈ ಅಸ್ವಸ್ಥತೆಯ ನಡುವೆ ದಿಡೀರ್ ಎದುರಾಗಿದ್ದು ಜಗತ್ತನ್ನೇ ಅಸ್ವಸ್ಥಗೊಳಿಸಲೆಂಬಂತೆ ಹುಟ್ಟಿಕೊಂಡ ಕೊರೊನಾ ವಾರ್ತೆ. ಮೊದಮೊದಲು ಇದು ನಮಗಲ್ಲ ಅಂದುಕೊಂಡು ಕೆಲಸ ಮಾಡುತ್ತಿದ್ದವರಿಗೆ ಜಗತ್ತಿನ ಒಂದೊಂದೇ ದೇಶಗಳು ಬಾಗಿಲು ಮುಚ್ಚುತ್ತಿರುವುದು ಕಂಡಾಗ ಎಲ್ಲರೊಳಗೂ ನಿಗೂಢ ಭಯ ಹುಟ್ಟಿಕೊಂಡಿತ್ತು. ಕೊನೆಗೂ ಲಾಕ್‌ಡೌನ್ ಕಾರಣದಿಂದ ಶೂಟಿಂಗ್ ನಿಲ್ಲಿಸಬೇಕಾಗಿ ಬಂದಿತ್ತು. ಆ ಅಜ್ಞಾತವಾಸದ ಕಾಲದಲ್ಲಿ ಎಷ್ಟು ಪ್ರಯತ್ನಿಸಿದರೂ ಚಿತ್ರಕಥೆಯಲ್ಲಿದ್ದ ಕೊರತೆ ಪೂರೈಸಿಕೊಳ್ಳಲಾಗಿರಲಿಲ್ಲ. ಮತ್ತೆ ಹೊರಾಂಗಣ ಶೂಟಿಂಗ್ ಸುರು ಮಾಡುವಾಗ ಅವರ ತಂಡದಲ್ಲಿದ್ದ ಇಬ್ಬರನ್ನು ಕಳೆದುಕೊಂಡಿದ್ದರು. ಸಹಜವಾಗಿ ಎಲ್ಲರನ್ನು ಮಂಕುತನ ಆವರಿಸಿತ್ತು. ಆದರೇನು... ನಡೆಯಲೇಬೇಕಲ್ಲ... ಆಗಿ ಹೋದ ಅವಾಂತರಗಳಿಂದ ಹೊರ ಬಂದು ಶೂಟಿಂಗ್ ಹಳಿ ಹತ್ತುತ್ತಿದೆ ಅಂದುಕೊಳ್ಳುತ್ತಿರುವಾಗ ದಿನದಿಂದ ದಿನಕ್ಕೆ ಗುರುಮೂರ್ತಿಯಲ್ಲೇನೋ ಸಮಸ್ಯೆ ಕಾಣಲಾರಂಭಿಸಿತ್ತು ಶೀನಿಗೆ. ಅದರಲ್ಲೂ ಎರಡು ಮೂರು ದಿನಗಳಿಂದ ರಿಟೇಕ್ ಜಾಸ್ತಿಯಾಗುತ್ತಿರುವುದು ಮತ್ತಷ್ಟು ಆತಂಕಕ್ಕೆ ಕಾರಣವಾದರೂ ಶೀನಿ ತೋರಿಸಿಕೊಳ್ಳಲಿಲ್ಲ. ಒಂದೆರಡು ಬಾರಿ ಆರೋಗ್ಯದ ಬಗ್ಗೆ ವಿಚಾರಿಸಿದ್ದ. ಈ ದಿನ ಅತ್ಯಂತ ಸೂಕ್ಷ್ಮ ಘಟ್ಟ. ಬಸವ ಬಿಜ್ಜಳನ ನಡುವಿನ ಬಿರುಕಿನ ಸನ್ನಿವೇಶದ ನಂತರದ ಬಸವಣ್ಣನ ಏಕಾಂತದ ತಲ್ಲಣಗಳ ಅಭಿವ್ಯಕ್ತಿ. 'ನರವಿಂದ್ಯದೊಳಗೆನ್ನ ಹುಲುಗಿಳಿಯ ಮಾಡಿ...' ವಚನವನ್ನು ಹಾಡುತ್ತ ಕೆರೆಯ ದಂಡೆಗೆ ಬರಬೇಕು. ಇಲ್ಲಿಯೇ ಗುರುಮೂರ್ತಿ ಸೋಲುತ್ತಿದ್ದ. ಶೀನಿ, ಗುರುಮೂರ್ತಿಗೆ ತಾನೇ ನೀರು ತಂದು ಕೊಟ್ಟು, ಹತ್ತು ನಿಮಿಷ ಕ್ಯಾರವಾನಲ್ಲಿ ಕುಳಿತು ವಿಶ್ರಾಂತಿ ತೆಗೆದುಕೊಳ್ಳಲು ಹೇಳಿ ಆತ ಕೇಳಿದ ವಚನವಿರುವ ಹಾಳೆಯನ್ನು ಅವನ ಕೈಗಿಟ್ಟ.

'ಶೀನಿ, ಕ್ಯಾರವಾನ್ ಬೇಡ. ಆ ಮರದ ನೆರಳಿಗೆ ಕುರ್ಚಿ ಹಾಕಿಸ್ತೀಯ?' ಶೂಟಿಂಗ್ ನಡೆಯುತ್ತಿದ್ದ ಬಯಲು ಸೀಮೆಯ ಆ ನೆಲದಲ್ಲಿ ಬೇಸಗೆಯ ಬಿಸಿಲಗಾವು ಬೆಳಗ್ಗೆಯೇ ಪ್ರತಾಪ ತೋರಿಸುತ್ತಿದ್ದುದರಿಂದ ಗುರುಮೂರ್ತಿಯ ಬೇಡಿಕೆ ಸಾಧುವಲ್ಲವೆನಿಸಿದರೂ, ಈಗಿನ ಸ್ಥಿತಿಯಲ್ಲಿ ಒಪ್ಪಿಕೊಳ್ಳದಿರಲು ಸಾಧ್ಯವಿಲ್ಲ. ಹಾಗಾದರೂ ಮೂಡಿಗೆ ಬಂದಾನು ಅನಿಸಿದ್ದರಿಂದ ಹುಡುಗನನ್ನು ಕರೆದು ಕುರ್ಚಿ ಹಾಕಿಸಿದ. ಗುರುಮೂರ್ತಿಗೆ ಎರಡು ದಿನಗಳಿಂದ ಹಾಸಿಗೆಗೆ ತಲೆ ಕೊಟ್ಟು ಇನ್ನೇನು ನಿದ್ದೆ ಹಿಡಿಯುತ್ತದೆ ಅನ್ನುವಷ್ಟರಲ್ಲಿ ಕನಸೋ ಭ್ರಮೆಯೋ ಎಂಬಂತೆ ಏನೇನೋ ಅನುಭವಗಳಾಗುತ್ತಿದ್ದವು. ದಿಗ್ಗನೆ ಎಚ್ಚರಾಗಿ ನೆನಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ. ಏನೂ ನೆನಪಾಗುತ್ತಿರಲಿಲ್ಲ. ಎದ್ದು ಕುಳಿತು ವಚನಗಳನ್ನು ಓದಲಾರಂಭಿಸಿದೊಡನೆ ತೂಕಡಿಕೆ... ಕನಸು... ಎಚ್ಚರ... ಆ ಅನುಭವಕ್ಕಾಗಿ ಮತ್ತೆ ಮತ್ತೆ ಕನವರಿಸುತ್ತಿದ್ದ. ಹೀಗಾಗುತ್ತಿದೆಯೆಂದು ಶೀನಿಗೂ ಹೇಳಿರಲಿಲ್ಲ. ಗುರುಮೂರ್ತಿ ಕುರ್ಚಿಯಲ್ಲಿ ಕುಳಿತು ಓದಲಾರಂಭಿಸಿದವನು ಏನೋ ಅಹಿತವೆನಿಸಿ, ಕುರ್ಚಿ ಸರಿಸಿ ಮರದ ಬುಡಕ್ಕೊರಗಿ ನೆಲದ ಮೇಲೆ ಕುಳಿತ. ನಿಧಾನವಾಗಿ ಗುನುಗಲಾರಂಭಿಸಿದ..

ನರವಿಂದ್ಯದೊಳಗೆನ್ನ ಹುಲುಗಿಳಿಯ ಮಾಡಿ
ಸಲಹುತ್ತ ಶಿವಶಿವ ಎಂದೋದಿಸಯ್ಯ
ಭಕ್ತಿಯೆಂಬ ಪಂಜರದೊಳಗೆ ಇಟ್ಟು ಸಲಹಯ್ಯ
ಕೂಡಲ ಸಂಗಮ ದೇವಾ।

ತನಗೆ ತಾನೇ ಹೇಳಿಕೊಳ್ಳುತ್ತ ಬಸವಣ್ಣ ಬೀದಿಯುದ್ದಕ್ಕೂ ನಡೆದೇ ನಡೆದ. ತನ್ನನ್ನೀಗ ಈ ಭವಕ್ಕೆ ಕಟ್ಟಿ ಹಾಕಬೇಕಾದ್ದು ಈ ಭಕ್ತಿಯೊಂದೇ. ಅಸಹಾಯಕರಿಗಾಗಿ ತಾನು ಮಾಡಬೇಕಾದ್ದು ಬಹಳಷ್ಟಿದೆ ಆ ಶಿವನ ಆಜ್ಞೆಯಂತೆ. ಎದೆ ಹೇಳಿದಂತೆ ಕೇಳಿದರೆ ಈ ಘಳಿಗೆಯಲ್ಲೇ ಎಲ್ಲಾ ಬಿಟ್ಟು ನಡೆದುಬಿಡಬೇಕು. ಆದರೆ, ಎದೆಯ ಮಾತು ಬುದ್ಧಿ ಒಪ್ಪುತ್ತಿಲ್ಲ. ನೀನು ಮಾಡುವ ಕೆಲಸ ಬಹಳವಿದೆ ಬಸವಾ. ಸ್ವಲ್ಪ ಸೈರಿಸಿಕೊ ಎಂದು ಎದೆಯನ್ನು ಸಂತೈಸುತ್ತಿತ್ತು. ಆದರೆ, ದಾಸೋಹಕ್ಕಾಗಿ